ಸೇರಿದೆ. ಈ ಕಾರ್ಯಕ್ರಮದ ಪ್ರಕಾರ ಮಾರ್ಚ್ ೧೯೮೮ ಅಷ್ಟರೊಳಗೆ ಆಗಬೇಕು. ನಾನು ತಮಗೆ ಭರವಸೆಕೊಡುತ್ತೇನೆ ಏನೆಂದರೆ ಇಷ್ಟರಲ್ಲೇ ಈ ಸಬ್‌ಸ್ಟೇಷನ್ ಸ್ಥಾಪನೆ ಮಾಡಿ ಆಗತಕ್ಕಂಥ ವೊಲ್ಟೇಜ್ ತೊಂದರೆಯನ್ನು ನಿವಾರಿಸುತ್ತೇವೆ. ಸಬ್‌ಡಿವಿಜನ್ ಕಛೇರಿ ಬೆಂಕಿಂದು ಕೇಳಿದ್ದೀರಿ. ಆದು ಈ ವರ್ಷದ ನಮ್ಮ ಕಾರ್ಯಕ್ರಮದಲ್ಲಿ ಸೇರಿಲ್ಲ. ಮುಂದಿನ ವರ್ಷದಲ್ಲಿ ಪ್ರಯತ್ನ ಮಾಡಬಹುದು.

ಬ್ರಹ್ಮಾವರ ಕ್ಷೇತ್ರದಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಕಳೆದ ೨ ವರ್ಷಗಳಿಂದ ರೂ. ೪೦,೦೦೦-೦೦ ಅನುದಾನ ಕೊಟ್ಟಿರುವುದು

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ೧೯೮೪ರಲ್ಲಿ ಸರ್ಕಾರಿ ಆಜ್ಞೆ ನಂಬರ್ ಇಡಿ ೯೬ ಎಂ. ಎಚ್. ಎಸ್. ೮೪, ತಾ. ೨೫-೬-೮೪ರಂತೆ ನನ್ನ ಮತದಾರ ಕ್ಷೇತ್ರದಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಕಳೆದ ೨ ವರ್ಷಗಳಿಂದ ರೂ. ೪೦,೦೦೦-೦೦ ಅನುದಾನ ಕೊಟ್ಟಿರುವುದಿಲ್ಲ. ವರ್ಷಕ್ಕೆ ೨೦ ಸಾವಿರ ರೂಪಾಯಿಗಳಂತೆ ಕೊಡುವ ಈ ಅನುದಾನಗಳಲ್ಲಿ ಪ್ರೌಢಶಾಲೆಗಳು ತಮಗೆ ಬೇಕಾದ ಫರ್ನಿಚರ್ ಮತ್ತು ಲ್ಯಾಬೊರೇಟರಿ ಸಾಮಗ್ರಿಗಳನ್ನು ಜೋಡಿಸಿ ಕೊಳ್ಳುತ್ತಾರೆ. ಆದರೆ ೧೯೮೫-೮೬ ಮತ್ತು ೧೯೮೬-೮೭ರ ಸಾಲಿನ ಒಟ್ಟು ೪೦,೦೦೦ ರೂ. ಗಳು ದೊರೆಯದೆ ಲ್ಯಾಬೊರೇಟರಿ ಸಾಮಗ್ರಿಗಳಿಲ್ಲದೇ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತುಂಬಾ ಅನಾನುಕೂಲ ಆಗಿರುವುದರಿಂದ ಈ ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರುಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ವಿದ್ಯಾಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ.

ಮಾಲೂರು ತಾಲ್ಲೂಕಿನಲ್ಲಿ ರೈತಾಪಿಜನ ಕೊಳವೆ ಬಾವಿಗಳನ್ನು ಹಾಕಿಕೊಂಡು ಬರಗಾಲದಲ್ಲಿ ತಮ್ಮ ಜೀವನ ನಡೆಸಲು ಅನುಕೂಲ ಕಲ್ಪಿಸುವುದು

ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು).—ಮಾನ್ಯ ಅಧ್ಯಕ್ಷರೇ, ಮಾಲೂರು ತಾಲ್ಲೂಕಿನಲ್ಲಿ ರೈತಾಪಿ ಜನ ಕೊಳವೆ ಬಾವಿಗಳನ್ನು ಹಾಕಿಕೊಂಡು ಈ ಬರಗಾಲದಲ್ಲಿ ತಮ್ಮ ಜೀವನ ನಡೆಸುತ್ತಿರುವುದು ಎಲ್ಲರಿಗೂ ತಿಳಿದವಿಷಯವಾಗಿದೆ. ಈ ಕೊಲಾರ ಜಿಲ್ಲೆಯಲ್ಲಿ ಯಾವ ನೀರಾವರಿ ಆಶ್ರಯವೂ ಇಲ್ಲದೆ, ಕೆರೆ ಕುಂಟೆಗಳು ಹೂಳಿನಿಂದ ಮುಚ್ಚಿ ಹೋಗಿ ಬಾವಿಗಳು ನೀರಿಲ್ಲದೆ ಬತ್ತಿ ಹೋಗಿ ಕೊಳವೆ ಬಾವಿಗಳು ಜೀವನಾಡಿಯಾಗಿ ಉಳಿದಿರುತ್ತವೆ. ರೈತಾಪಿ ಜನ ಸ್ವಂತ ಖರ್ಚಿನಿಂದ ಕೊಳವೆ ಬಾವಿಗಳನ್ನು ಹಾಕಿಕೊಂಡಿರುವುದಲ್ಲದೆ, ಬಡವರು, ದೀನದಲಿತರು ಸರ್ಕಾರದಿಂದ ಒದಗುವ ಸಾಲ ಸೌಲಭ್ಯಗಳು, ಬ್ಯಾಂಕುಗಳಿಂದ ಹಾಗೂ ನೂರು ಬಾವಿ ಯೋಜನೆಯ ಅಡಿಯಲ್ಲಿ ದೊರೆಯುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು, ಕೊಳವೆಬಾವಿಗಳನ್ನು ಕೊರೆದು ತಮ್ಮ ಜೀವನವನ್ನು ಸಾಗಿಸುತ್ತಾ ಇರುವುದು ಸರ್ಕಾರಕ್ಕೆ ಗೊತ್ತಿರುವ ವಿಷಯ. ಇದುವರೆಗೂ ಮಾಲೂರು ತಾಲ್ಲೂಕನ್ನು ಭೂಗರ್ಭ ಇಲಾಖೆಯವರು ''ಬಳಪು'' ಎಂದು ಪರಿಗಣಿಸಿದ್ದ ಪ್ರಯುಕ್ತ, ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶವಿದ್ದುದು ಸರಿಯಷ್ಟೆ. ಆದರೆ ಈ ವರ್ಷ ಮಾಲೂರು ತಾಲ್ಲೂಕನ್ನು ''ಗ್ರೇ'' ಎಂದು ಪರಿಗಣಿಸಿ, ತಾಲ್ಲೂಕಿಗೆ ಬೂದು ಬಣ್ಣ ಹಚ್ಚಿ ಬಡಬಗ್ಗರಿಗೆ ಆಗಬೇಕಾದ ಕೊಳವೆ ಬಾವಿ ಕೊರೆಯುವ ಸವಲತ್ತುಗಳಿಗೆ ಅಡ್ಡಿಯಾಗಿ ಬಹಳ ತೊಂದರೆಯಾಗಿದೆ. ಈ ಬಗ್ಗೆ ಜನಗಳಿಂದ ಬಹಳ ಒತ್ತಡವಿದೆ. ಕೊರೆದ ಕೊಳವೆ ಬಾವಿಗಳಲ್ಲಿ ನೂರಕ್ಕೆ ಎಂಭತ್ತು ಬಾವಿಗಳಲ್ಲಿ ಒಳ್ಳೆಯ ನೀರು ದೊರೆತು ಅನುಕೂಲ ಪರಿಸ್ಥಿತಿಯಲ್ಲಿರುವ ತಾಲ್ಲೂಕನ್ನು ''ಗ್ರೇ'' ಎಂದು ಪರಿಗಣಿಸಿರುವುದು ಸಾಧುವಲ್ಲವಾಗಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಜರೂರು ಗಮನ ಹರಿಸಿ, ''ಗ್ರೇ'' ಎಂಬುದನ್ನು ''ಬಳಪು'' ಎಂದು ಪರಿಗಣಿಸಿ, ಕೊಳವೆ ಬಾವಿಗಳನ್ನು ತೋಡಿಸಲು ಅವಕಾಶ ಮಾಡಿಕೊಟ್ಟು ಬರಗಾಲದಲ್ಲಿ ಬಡ ರೈತರು ತಮ್ಮ ಜೀವನವನ್ನು ಸುಗಮವಾಗಿ ಸಾಗಿಸಲು ಅವಕಾಶ ಮಾಡಿಕೊಡಬೇಕಾಗಿ ಕೋರುತ್ತೇನೆ.

ಅಧ್ಯಕ್ಷರು.—ಮಲ್ಟಿ ಪರ್‌ಪಸ್ ಮಂತ್ರಿಗಳಾದ ರಘುಪತಿಯವರೇ, ತಾವೇ ಹೇಳಿ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರ ಪರವಾಗಿ ಈ ಕೆಳಕಂಡ ಲಿಖಿತ ಉತ್ತರವನ್ನು ಹೇಳುತ್ತೇನೆ.